***<u>Witness present and duly sworn on: 15-02-2022</u>***

***<u>Cross -Examination :</u>****by Sri. HGS counsel for Respondent No.1*

ಅಪಘಾತ ಎಲ್ಲಿ ಆಗಿದೆ ಎಂದರೆ ಸಾಕ್ಷಿ ಗೇಟ್ ಬಳಿ ಆಗಿರುತ್ತದೆ ಎಂದು ಹೇಳುತ್ತಾರೆ. ಆದರೆ ಯಾವ ಊರು ಎಂದು ಗೊತಿಲ್ಲ. ಆ ದಿನ ಮುಳಬಾಗಿಲಿನಿಂದ ಕೊತ್ತೂರಿಗೆ ಟ್ಯಾಕ್ಟರನಲ್ಲಿ ಹೋಗುತಿದ್ದೆ. ಸದರಿ ಟ್ರ್ಯಾಕ್ಟರನ್ನು ಶಂಕರಪ್ಪ ಇವರು ಚಲಾಯಿಸುತಿದ್ದು, ನಾನು ಪಕ್ಕದಲ್ಲಿ ಕುಳಿತುಕೊಂಡಿದ್ದೆ. ಸದರಿ ಟಸ್ತೆ ರಾಷ್ಟ್ರೀಯ ಹೆದ್ದಾಗಿ ಆಗಿರುತ್ತದೆ. ಸದರಿ ರಸ್ತೆಯ ಅಗಲ ಗೊತಿಲ್ಲ, ಆದರೆ ಅದು ಡಬಲ್ ರೋಡ್ ಎಂದು ಹೇಳುತ್ತಾರೆ. ಅಪಘಾತ ರಾತ್ರಿ 8-30 ಗಂಟೆಗೆ ಆಗಿರುತ್ತದೆ. ಸದರಿ ರಸ್ತೆಯಲ್ಲಿ ಯಾವಾಗಲೂ ವಾಹನಗಳು ಓಡಾಡುತಿರುತ್ತವೆ ಎಂದರೆ ಸರಿ. ನಾವು ಆ ದಿನ ಟ್ರ್ಯಾಕ್ಟರನಲ್ಲಿ ಕಡ್ಡಿಗಳನ್ನು ಓವರ್ ಲೋಡ್ ಮಾಡಿಕೊಂಡು ಹೋಗುತಿದ್ದಾಗ, ಕತ್ತಲಾಗಿದ್ದರಿಂದ ನಮ್ಮ ಟ್ರ್ಯಾಕ್ಟರ ನಿಯಂತ್ರಣ ತಪ್ಪಿ ಬಿದ್ದು ಅಪಘಾತವಾಗಿದ್ದು, ಕ್ಯಾಂಟರ ಲಾರಿ ವಹನ ಚಾಲಕನ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಅಪಘಾತವಾಗದ ಕಾರಣ ನಾನು ಈ ಪ್ರಕರಣದಲ್ಲಿ IMV ವರದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಟ್ಯಾಕ್ಟರನಲ್ಲಿ ಅನಧೀಕೃತ ಪ್ರಯಾಣಿಕನಾಗಿ ಪ್ರಯಾಣಿಸುತಿದ್ದು, ಟ್ಯಾಕ್ಟರ ಚಾಲಕನ ತಪ್ಪಿನಿಂದ ಅಪಘಾತವಾಗಿದ್ದು ಪರಿಹಾರ ಸಿಗುವುದಿಲ್ಲ ಎಂಬ ಉದ್ದೇಶದಿಂದ ಕ್ಯಾಂಟರ ಲಾರಿ ಚಾಲಕನ ಮೇಲೆ ಸುಳ್ಳು ದೂರು ಕೊಟಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳಿಗೂ ಮತ್ತು ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಅಪಘಾತದ ನಂತರ ನಾನು ಜಾಲಪ್ಪ ಮೆಡಿಕಲ್ ಕಾಲೇಜಿಗೆ ದಾಖಲಾಗಿದ್ದೆ. ನನಗೆ ಬೆರಳಿಗೆ ತರಚಿದ ಗಾಯವಾಗಿದ್ದು ತೀವ್ರ ಸ್ವರೂಪದ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ಕೇವಲ Conservative Treatment ಕೊಟಿದ್ದಾರೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ವೆಚ್ಚ

ರೂ.12,000/- ಖರ್ಚಾಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮೆಡಿಕಲ್ ಖರ್ಚು ಕೇವಲ ರೂ.6,000/- ಮಾತ್ರ ಆಗಿದ್ದು, ನಾನು ಅಡ್ವಾನ್ಸ್ ಬಿಲ್ಲನ್ನು ಸೇರಿಸಿ ಒಟ್ಟು ರೂ.12,000/- ಆಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳ ಈಗ ವಾಸಿಯಾಗಿದ್ದು, ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಿಪಿ-5 ರ ಪ್ರಕಾರ ನನಗೆ ಯಾವುದೇ ಮೂಳೆ ಮುರಿತದ ತೀವ್ರ ಸ್ವರೂಪದ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ.

ನಿಪಿ-6 ರ ವೈದ್ಯಕೀಯ ವೆಚ್ಚ ನನಗೆ ಮರುಸಂದಾಯ ಅಗಿದೆ ಎಂದರೆ ಸರಿಯಲ್ಲ. ಪೋಲೀಸರಿಗೆ ಶಂಕ್ರಪ್ಪ ಈತನು ದೂರು ಕೊಟಿರುತ್ತಾರೆ. ಅವರು ಸಹ ಅಪಘಾತ ನೋಡಿರುತ್ತಾರೆ. ಅವರಿಗೂ ಗಾಯಗಳಾಗಿತ್ತು. ಕ್ಯಾಂಟರ ವಾಹನ ಚಾಲಕನ ತಪ್ಪಿನಿಂದ ಯಾವುದೇ ಅಪಘಾತವಾಗದೆ ಇದ್ದರು ಸಹ ಪರಿಹಾರ ಪಡೆಯಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಾಸಿಕ ರೂ.20,000/- ವೇತನ ಇತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಯಾವುದೇ ವೇತನ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಆರಾಮಾಗಿದ್ದು, ಈಗ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 7 ರ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ

(Computerized as per my dictation in open court)

R.O.I.&.A.C.

VIII Addl. Judge,
Court of Small Causes,
Bengaluru

ಸಾಕ್ಷಿಯ ಸಹಿಃ